ಬಾಗಿಲು ತೆಗೆಯಲು ನಿರಾಕರಿಸಿದ್ದಕ್ಕೆ, ದೀಪೂ ಒದ್ದು ಒಡೆದಿರಬಹುದೆ? ಹೇಗೂ ಪ್ರೊ. ಭಾಸ್ಕರ್ ಮನೆಯಲ್ಲಿಲ್ಲದ್ದು ಆತನಿಗೆ ಗೊತ್ತಿತ್ತು. ಪವನ್ ಹಾಗೂ ಡಾ. ಗಣೇಶರು ಕೊಲೆಯಲ್ಲಿ ತಮ್ಮ ಪಾತ್ರವಿಲ್ಲವೆಂದು ಅಷ್ಟೊಂದು ನಿಖರವಾಗಿ ಹೇಳುತ್ತಿರುವಾಗ ಆ ಹಿನ್ನೆಲೆಯಲ್ಲೂ ದೀಪೂವಿನ ವಿಚಾರಣೆ ಆಗಬೇಕಾದ್ದು ಅನಿವಾರ್ಯ. ಅಷ್ಟಕ್ಕೂ ಕೈಚೀಲ ತರಕಾರಿಯಾದಿಗಳು ಕಣ್ಣೆದುರಿಗೇ ಇದ್ದಾಗ ಅವನನ್ನು ಸುಮ್ಮನೆ ಬಿಟ್ಟರೆ ಹೇಗೆ? ಭಾಗಿಸಿದಾಗ ನಟರಾಜ್‌ರಿಗೆ ಶೇಷವಾಗಿ ಸಿಕ್ಕಿದ್ದು ದೀಪೂ!

***

ನಟರಾಜ ಪಟ್ಟಣಶೆಟ್ಟರು ದೀಪೂವಿನ ಬಗ್ಗೆ ಮನಸ್ಸನ್ನು ಕೇಂದ್ರೀಕರಿಸಿದರು. ಇದಕ್ಕೆ ಹೊಂದಿಕೆಯಾಗುವಂತಹ ಇನ್ನೊಂದು ಘಟನೆ ವೀರನಗರದಲ್ಲೇ ನಡೆದುಹೋಯಿತು. ಯಾವನೋ ಒಬ್ಬ ಲಾರಿ ಡ್ರೈವರ್ ಶೀಲಾಳ ಕೊಲೆಯ ವಿವರವಿದ್ದ ಪತ್ರಿಕೆಯೊಂದನ್ನು ಹಿಡಿದುಕೊಂಡು ವೀರನಗರದ ಪೊಲೀಸ್ ಸ್ಟೇಷನ್‌ಗೆ ಬಂದ. ಅದರಲ್ಲಿ ದೀಪೂವಿನ ಚಿತ್ರ ಅಚ್ಚಾಗಿತ್ತು. ಒಳಗೆ ಹೋದವನೇ ಸಬ್ ಇನ್ಸ್‌ಪೆಕ್ಟರ್‌ರಿಗೆ ವರದಿ ಒಪ್ಪಿಸಿದ.

‘ಸರ್, ನಾನೊಬ್ಬ ಲಾರಿ ಡ್ರೈವರ್, ಮೊನ್ನೆ ಭಾನುವಾರ ರಾತ್ರಿ ಮೈಸೂರಿನಿಂದ ಈ ದಾರಿಯಾಗಿ ಬರುತ್ತಿದ್ದೆ. ಲಾರಿ ಕೊಡವೂರಿಗೆ ತಲುಪಿದಾಗ ಯುವಕನೊಬ್ಬ ಕೈತೋರಿಸಿದ. ದಾರಿ ಖರ್ಚಿಗೆ ಇರ್ಲೀಂತ ಅವನನ್ನು ಹತ್ತಿಸಿಕೊಂಡೆ. ಒಳಗಿನ ದೀಪದ ಬೆಳಕಿನಲ್ಲಿ ಅವನ ಮುಖವನ್ನು ಅಸ್ಪಷ್ಟವಾಗಿ ನೋಡಿದ್ದೆ. ಲಾರಿ ಚಲಿಸುತ್ತಿದ್ದಂತೆಯೇ ನಿದ್ದೆ ಕಳೆಯಲು ಆತನನ್ನು ಮಾತನಾಡಿಸೋಣವೆಂದು ನೋಡಿದರೆ ಆತ ಹೊರಗಡೆ ನೋಡುತ್ತಿದ್ದ. ಎಂಥ ವಿಚಿತ್ರ ಹುಡುಗನಪ್ಪ ಅಂತ ನಾನು ಸುಮ್ಮನಿದ್ದೆ. ವೀರನಗರ ತಲುಪುತ್ತಿದ್ದಂತೆಯೇ ಹತ್ತು ರೂಪಾಯಿ ನೋಟನ್ನು ನನ್ನ ಕೈಯಲ್ಲಿಟ್ಟು ಇಳಿದು ಹೋಗಿಯೇ ಬಿಟ್ಟ.

‘ಇವತ್ತು ಮನೆಗೆ ಬರುತ್ತಿದ್ದಂತೆಯೇ ನನ್ನ ಮಗಳು ಪಕ್ಕದೂರಲ್ಲಿ ನಡೆದ ಕೊಲೆ ಬಗ್ಗೆ ಹೇಳಿದಳು. ಈ ಪೇಪರ್ ಕೊಟ್ಟಳು. ನೋಡೋಣಾಂತ ಪೇಪರ್ ತೆಗೆದು ನೋಡಿದೆ. ಆ ಮಧ್ಯರಾತ್ರಿ ಕೊಡವೂರಿನಿಂದ ನನ್ನ ಲಾರಿ ಹತ್ತಿದ ಯುವಕನಿಗೂ ಈ ಚಿತ್ರದಲ್ಲಿರುವವನಿಗೂ ಸಂಬಂಧ ಇರಬಹುದೂಂತ ಅನ್ನಿಸ್ತು. ನನ್ನ ಅನಿಸಿಕೆ ಸುಳ್ಳಾಗಿರ್ಲೂಬಹುದು. ಗೊತ್ತಿದ್ದದ್ದನ್ನು ಹೇಳಿದೆ’ ಎಂದ. ಆತನ ಸಾಚಾತನವನ್ನು ಮೆಚ್ಚಿಕೊಂಡ ಇನ್ಸ್‌ಪೆಕ್ಟರ್, ಅಗತ್ಯ ಬಿದ್ದರೆ ಕರೆದಾಗ ಬರಬೇಕೆಂದು ಹೇಳಿ ಅವನನ್ನು ಕಳುಹಿಸಿದರು.

***

ನಟರಾಜ ಪಟ್ಟಣಶೆಟ್ಟರು ಸ್ಟೇಷನ್‌ಗೆ ತಲುಪಬೇಕಿದ್ದರೆ ಇನ್ಸ್‌ಪೆಕ್ಟರ್ ದೀಪೂನ ಕುರಿತು ವಿಚಾರಣೆಗೆ ತೊಡಗಿ ಆಗಿತ್ತು. ವೀರನಗರದಲ್ಲಿ ದೀಪೂ ತರಕಾರಿ, ಹಣ್ಣು ಅಂಗಡಿಗಳವರನ್ನು ವಿಚಾರಿಸಲಾಗಿತ್ತು. ಕೊಡವೂರಿನ ಅಂಗಡಿಗಳಿಗೆ ನುಗ್ಗಿ, ಸೋಮಾರಿಕಟ್ಟೆಯ ಮಂದಿಗೆ ಬರೆಯೆಳೆದಾಗಿತ್ತು. ಆತನ ವೀರನಗರದ ಗೆಳೆಯರನ್ನು ಪೊಲೀಸ್ ಸ್ಟೇಷನ್‌ನಲ್ಲಿ ಕೂಡಿ ಹಾಕಿ ಥಳಿಸಲಾಗಿತ್ತು. ನಟರಾಜ್ ಅವರನ್ನೆಲ್ಲ ಮತ್ತೊಮ್ಮೆ ವಿಚಾರಿಸಿದರು. ಅದು ಅಂಥ ಲಾಭದಾಯಕವಾಗಿರಲಿಲ್ಲ. ಕೊಡವೂರಿನ ಬೀಡಿ, ಸಿಗರೇಟ್ ಮಾರುವ ಅಂಗಡಿಯಾತನಿಗೆ ದೀಪೂನ ವಿಚಾರ ಗೊತ್ತಿರಬಹುದೆಂದು ಪ್ರೊ. ಭಾಸ್ಕರ್ ಸೂಚನೆ ನೀಡಿದ್ದರು. ಆ ಸೂಚನೆಯನ್ವಯ ಗೂಡಂಗಡಿಯವನನ್ನು ನಟರಾಜ್ ಭೇಟಿ ಮಾಡಿದರು. ಬಹಳ ಆತ್ಮೀಯವಾಗಿಯೇ ದೀಪೂನ ಕುರಿತ ವಿವರ ಕೇಳಿದರು. ಸದ್ಯದ ವಿಚಾರ ತನಗೇನೂ ಗೊತ್ತಿಲ್ಲವೆಂದೂ ಆತ ಮೂಲತಃ ಕೇರಳದ ತಲಚೇರಿಯವನೆಂದೂ ಆತನ ನಿಜವಾದ ಹೆಸರು ದೀಪೂ ಅಲ್ಲವೆಂದೂ ತಿಳಿಸಿದ. ಬೆಂಗಳೂರಿನಲ್ಲಿ ಹೋಟೆಲ್ ಕೆಲಸದಲ್ಲಿದ್ದವನೆಂದೂ ಯಾವುದೋ ಜಗಳದಲ್ಲಿ ಸಿಕ್ಕಿಬಿದ್ದು ಇಲ್ಲಿಗೆ ಓಡಿ ಬಂದನೆಂದೂ ತಿಳಿಸಿದ. ಯಾವುದಾದರೂ ಕಾಫಿ ತೋಟದಲ್ಲಿ ಕೆಲಸ ಸಿಗಬಹುದೇ ಎಂದು ವಿಚಾರಿಸ್ತಾ ಇದ್ದ. ಮಲೆಯಾಳಿಯಾದ ಕಾರಣ ತಾನವನನ್ನು ತನ್ನೊಂದಿಗೆ ಇರಿಸಿಕೊಂಡನೆಂದೂ ಹೇಳಿದ.

ಅಷ್ಟು ವಿವರಗಳೊಂದಿಗೆ ನಟರಾಜ್ ತಲಚೇರಿಗೆ ಹೋದರೆ ಹೇಗೆ? ಎಂದು ಯೋಚಿಸಿದರೂ ಬೆಂಗಳೂರಿಗೇ ಮೊದಲು ಹೋಗುವುದು ಒಳಿತೆಂದು ನಿಶ್ಚಯಿಸಿದರು. ಬೆಂಗಳೂರು ತಲುಪಿದ ನಟರಾಜ್ ನೇರವಾಗಿ ಸನಿಹದ ಪೊಲೀಸ್ ಸ್ಟೇಷನ್‌ಗೆ ಹೋದರು.

ಪ್ರೊ. ಭಾಸ್ಕರ್‌ರಿಂದ ಸಂಗ್ರಹಿಸಿದ್ದ ದೀಪೂನ ಫೋಟೊಗಳನ್ನು ಇನ್ಸ್‌ಪೆಕ್ಟರ್‌ರ ಮುಂದೆ ಹರಡಿದರು. ಅವರ ಫೈಲಿನಲ್ಲಿ ಆ ಮುಖದ ರೌಡಿ ಯಾರಾದರೂ ಇರಬಹುದೇ ಎಂದು ಶೋಧಿಸಿದರು. ಗೋಡೆಯಲ್ಲೆಲ್ಲ ಹುಡುಕಾಡಿದರು. ಇಲ್ಲವೆಂಬುದು ಖಾತ್ರಿಯಾಯಿತು. ನಾಲ್ಕಾರು ಪೊಲೀಸ್ ಸ್ಟೇಷನ್ ಸುತ್ತುತ್ತಿದ್ದಂತೆಯೆ ಬಳೆಪೇಟೆ ಪೊಲೀಸ್ ಸ್ಟೇಷನ್‌ನಲ್ಲಿ ‘ಚಾಕೊ’ ಎಂಬಾತನ ಮೇಲೆ ಹೋಟೆಲ್ ಮಾಲಕನೊಬ್ಬ ಬರೆದ ದೂರು ಅರ್ಜಿಯೊಂದು ಲಭಿಸಿತು. ಆತ ಕೆಲಸ ಮಾಡುತ್ತಿದ್ದ ಎನ್ನಲಾದ ಆ ಹೋಟೆಲನ್ನು ಪತ್ತೆ ಹಚ್ಚಿ ವಿಚಾರಿಸಿದರು. ತನ್ನ ಕೈಯಲ್ಲಿದ್ದ ಭಾವಚಿತ್ರಗಳನ್ನು ತೋರಿಸಿದರು. ಚಿತ್ರ ಕಂಡ ತಕ್ಷಣ ‘ಈತ ಚಾಕೊ, ಖಂಡಿತವಾಗಿ ಚಾಕೋನೇ ಸರ್’ ಎಂದ.

‘ಇವನ ಹೆಸರು ದೀಪೂ’

‘ಹೆಸರು ಬದಲಾಯಿಸಿರಬಹುದು ಸರ್. ಅವ ಬಹಳ ಚಾಲೂ ಇದ್ದ. ಹದಿನೈದು ಹದಿನಾರರ ಹುಡುಗನಾಗಿದ್ದಾಗ ಇಲ್ಲಿ ಕೆಲಸ ಮಾಡ್ತಾ ಇದ್ದ. ಕೇರಳದಿಂದ ಬಂದವ, ನಮ್ಮವನೇಂತ ಕೆಲಸ ಕೊಟ್ಟೆ. ಅವನಿಗೆ ವಯಸ್ಸಿಗೆ ಮೀರಿದ ಲೋಕಾನುಭವ ಇತ್ತು ಸಾರ್. ರಾತ್ರಿ ಎಂಟು ಗಂಟೆವರೆಗೆ ಹೋಟೆಲ್ ಕೆಲಸ. ಆಮೇಲೆ ಎಲ್ಲಿ ಮಾಯ ಆಗ್ತಿದ್ನೋ ಗೊತ್ತಾಗ್ತಿರಲಿಲ್ಲ. ಒಮ್ಮೆ ನಮ್ಮಲ್ಲಿರುವ ಅಂತೋಣಿ ಅದನ್ನು ಪತ್ತೆ ಹಚ್ಚಿ ಬಿಟ್ಟ.’

‘ಹ್ಞೂಂ – ಮತ್ತೆ?’

‘ರಾತ್ರಿಯಾಗುತ್ತಲೇ ಮಂದಿಯ ಆಸೆಗಳನ್ನು ಈಡೇರಿಸುವ ಹೆಣ್ಣುಗಳಿಗಾಗಿ ಬೇಟೆ ನಡೆಸುತ್ತಿದ್ದ. ಹೀಗೆ ಕರೆತಂದ ಹೆಣ್ಣುಗಳನ್ನು ಹೋಟೆಲುಗಳಿಗೆ ಬರುವ ಗಿರಾಕಿಗಳಿಗೆ ತಾಗಿಸಿಕೊಡುತ್ತಿದ್ದ. ಅದಕ್ಕೆ ಕಮಿಷನ್ ಪಡೆಯುತ್ತಿದ್ದ. ನಮಗಿದು ಸ್ವಲ್ಪ ತಡವಾಗಿ ಗೊತ್ತಾಯಿತು. ಅಷ್ಟರಲ್ಲೇ ಒಮ್ಮೆ ಪಕ್ಕದ ಲಾಡ್ಜಿನಲ್ಲಿ ಪೊಲೀಸ್ ರೈಡೂ ಆಗಿತ್ತು. ಇದು ಚಾಕೋನ ಕೆಲಸವೆಂದು ಅಂತೋಣಿಗೆ ಗೊತ್ತಾಯಿತು. ಈ ವಿಚಾರವನ್ನು ಅವನೇ ಪೊಲೀಸರಿಗೆ ಹೇಳಿದ. ಚಾಕೊ ಒಂದು ದಿನ ರಿಮಾಂಡಿನಲ್ಲಿದ್ದ. ನಾನೇ ಬಿಡಿಸಿಕೊಂಡು ಬಂದಿದ್ದೆ. ಮಾರನೆಯ ದಿನ ಬಂದವನೆ ಚಿಕ್ಕದೊಂದು ಚೂರಿಯಲ್ಲಿ ಅಂತೋಣಿಗೆ ನಾಲ್ಕಾರು ಗಾಯಗಳನ್ನು ಮಾಡಿ ಓಡಿ ಹೋದವ ಹಿಂದಿರುಗಿ ಬರಲಿಲ್ಲ. ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟಿದ್ದೆನಾದರೂ ಫಲಕಾರಿಯಾಗಲಿಲ್ಲ.

‘ನಿಮಗಾತನ ಊರು ಗೊತ್ತೆ?’

‘ಸರಿಯಾಗಿ ಗೊತ್ತಿಲ್ಲ. ಅಂತೋಣಿಯನ್ನು ಕೇಳಿದರೆ ಹೆಚ್ಚಿನ ವಿವರವೇನಾದರೂ ಗೊತ್ತಾಗಬಹುದು. ಕರೆಯಲಾ ಸರ್’ ಮೂಲಕ ಕೇಳಿದ.

‘ಸರಿ’ ಎಂದರು ನಟರಾಜ್.

ಒಳಗಿನಿಂದ ಅಂತೋಣಿ ಬಂದ. ‘ನೀನೇನಾ ಅಂತೋಣಿ?’ ನಟರಾಜ್ ಪ್ರಶ್ನಿಸಿದರು.

‘ಹೌದು ಸಾರ್’ ಕಂಪಿತನಾಗಿ ಹೇಳಿದ ಅಂತೋಣಿ.

‘ಚಾಕೊ ನಿನಗೆ ಪರಿಚಯಾನಾ?’

‘ಹೌದು ಸಾರ್, ಅವನೂ ನನ್ನ ಊರಿನವನೆ, ತಲಚೇರಿ. ನಾನೇ ಅವನನ್ನಿಲ್ಲಿಗೆ ಕರೆ ತಂದೆ. ಊರಲ್ಲಿ ಕೋಮುಗಲಭೆಯಾಗಿ ಊರಿಗೆ ಊರೇ ಉರಿದು ಹೋದಾಗ ಅವನ ತಂದೆ ತಾಯಿ ಕೂಡ ಸತ್ತು ಹೋಗಿದ್ದರು. ಅದೃಷ್ಟವಶಾತ್ ಬದುಕಿಕೊಂಡ ಅನಾಥ ಹುಡುಗನನ್ನು ಇಲ್ಲಿಗೆ ಕರೆದುಕೊಂಡು ಬಂದು ದನಿಗೆ ಹೇಳಿ ಇಲ್ಲೇ ಕೆಲಸ ಕೊಡಿಸಿದೆ.’

‘ಈ ಚಿತ್ರದಲ್ಲಿರುವಾತ ಗೊತ್ತೇ ನಿನಗೆ?’

‘ಗೊತ್ತು ಸಾರ್, ಇವನೇ ಚಾಕೊ. ಈಗ ಬೆಳೆದು ದೊಡ್ಡವನಾಗಿಬಿಟ್ಟಿದ್ದಾನೆ’ ಎಂದ ಅಂತೋಣಿ.

ಆತನ ಮಾತುಗಳು ಸ್ಪಷ್ಟವಾಗಿದ್ದುವು. ಚಾಕೊನೇ ದೀಪೂ ಅನ್ನೋದರಲ್ಲಿ ಸಂಶಯವಿರಲಿಲ್ಲ.

‘ಆತನ ಊರಿನ ಬಗ್ಗೆ ಇನ್ನೇನು ಗೊತ್ತು?’

‘ತಲಚೇರಿ ಪೇಟೆಗೆ ತಾಗಿಕೊಂಡಿರುವ ಉಳ್ಳೋಡಿ ಅವನ ಊರು. ಈಗ ಅವನ ಕಡೆಯವರು ಯಾರೂ ಅಲ್ಲಿಲ್ಲ. ಅವರಿದ್ದ ಮನೆಯನ್ನು ಚಾಕೋನ ದೂರದ ಸಂಬಂಧಿಯೊಬ್ಬ ವಶಪಡಿಸಿಕೊಂಡಿದ್ದಾನೆ. ಚಾಕೋ ಇಲ್ಲಿದ್ದಾಗ ತನ್ನ ಮನೆಯ ಬಗ್ಗೆ ಯೋಚಿಸುತ್ತಿದ್ದುದುಂಟು. ಮನೆಯಲ್ಲಿರುವ ಮಾವನನ್ನು ಕೊಂದೇ ಮುಗಿಸಬೇಕಷ್ಟೆ. ಇಲ್ಲದೇ ಹೋದರೆ ನನ್ನ ಮನೆ ನನಗೆ ಸಿಗಲಾರದು ಎನ್ನುತ್ತಿದ್ದ.’

‘ಅವನಿಗೆ ಊರಿನ, ಮನೆಯ ಬಗ್ಗೆ ಪ್ರೀತಿಯಿತ್ತೆ?’

‘ಇತ್ತು ಸಾರ್, ಆಗಾಗ ತಂದೆತಾಯಿಯರನ್ನು ನೆನೆಸಿಕೊಳ್ತಿದ್ದ. ಮನೆ ವಾಪಸ್ ಪಡೆಯಬೇಕಿದ್ದರೆ ಅಲ್ಲೇ ಹೋಗಿ ನೆಲೆಸಬೇಕೂಂತಾನೂ ಹೇಳ್ತಿದ್ದ.’

‘ಸರಿ, ಏನಾದರೂ ಮಾಹಿತಿ ಬೇಕಿದ್ದರೆ ಹೇಳಿ ಕಳುಹಿಸ್ತೇನೆ. ಸ್ಟೇಷನ್‌ಗೆ ಬಂದು ಹಾಜರಾಗಬೇಕು’. ಹೀಗೆಂದವರೇ ನಟರಾಜ್ ಜೀಪ್ ಹತ್ತಿ ಹೊರಟುಹೋದರು.

(ಸಶೇಷ)